42

ಧಾರ್ಮಿಕ ದತ್ತಿ ಆಯುಕ್ತರ ಕಛೇರಿ,
2ನೇ ಮಹಡಿ, ಮಹದೇಶ್ವರ ಭವನ,
ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ,
ಬೆಂಗಳೂರು-18, ದಿನಾಂಕ:29-1-1999.

ಸಂಖ್ಯೆ: ಎಡಿಎಂ.6.ಸಿಆರ್ 36:98-99

## ಸುತ್ತೋಲೆ

ವಿಷಯ:- ಪೂಜಾ ಸ್ಥಳಗಳಲ್ಲಿ ಮತ್ತು ಧಾರ್ಮಿಕ ಉತ್ಸವ: ಜಾತ್ರೆ ಸಮಯಗಳಲ್ಲಿ ಸಾರ್ವಜನಿಕ ರಸ್ತೆಯಲ್ಲಿ ಪ್ರಾಣಿ ಬಲಿ ನಿಷೇಧಿಸುವ ಕುರಿತು.

ಉಲ್ಲೇಖ:- ಈ ಕಛೇರಿಯ ಸುತ್ತೋಲೆ ಸಂಖ್ಯೆ: ಎಡಿಎಂ.6. ಸಿಆರ್.36:98-99, ದಿನಾಂಕ:25-9-1998.

---

ಉಲ್ಲೇಖಿತ ಸುತ್ತೋಲೆಯನ್ನು ಮುಂದುವರಿಸುತ್ತಾ, ಪೂಜಾ ಸ್ಥಳಗಳಲ್ಲಿ ಹಾಗೂ ಧಾರ್ಮಿಕ ಉತ್ಸವ: ಜಾತ್ರೆ ಸಮಯಗಳಲ್ಲಿ ಸಾರ್ವಜನಿಕ ರಸ್ತೆಯಲ್ಲಿ ಅಮಾನುಷೀಯ ಪದ್ಧತಿಯಾದ ಪ್ರಾಣಿಬಲಿ ನಿಷೇಧಿಸುವ ಕುರಿತು, ಈ ಕಛೇರಿಯಿಂದ ನೀಡಲಾಗಿರುವ ನಿರ್ದೇಶನಗಳನ್ನು ಪುನರುಚ್ಚರಿಸುತ್ತಾ, ಈ ಕೆಳಕಂಡ ಕಾನೂನು ಅಂಶಗಳನ್ನು ತಮ್ಮ ಗಮನಕ್ಕೆ ತರಲಾಗಿದೆ.

ಕರ್ನಾಟಕ ಪ್ರಾಣಿ ಬಲಿ ನಿಷೇಧ ಕಾಯ್ದೆ-1959 ರಂತೆ, ಪೋಲೀಸ ಸಬ ಇನ್ಸ್‌ಪೆಕ್ಟರ ಹುದ್ದೆಗೆ ಕಡಿಮೆ ಇಲ್ಲದ ಯಾವುದೇ ಪೋಲೀಸ ಅಧಿಕಾರಿಯು ಈ ಕಾನೂನಿನ ಕಲಂ 3, 4 ಮತ್ತು 5 ನ್ನು ಉಲ್ಲಂಘಿಸಿದ ಅಥವಾ ಉಲ್ಲಂಘನೆಗೆ ಪ್ರಯತ್ನಿಸುತ್ತಿರುವ ಯಾವುದೇ ವ್ಯಕ್ತಿಯನ್ನು ವಾರಂಟ ಇಲ್ಲದೆ ಬಂಧಿಸಬಹುದು, ಹಾಗೂ ಕ್ರಿಮಿನಲ ದಂಡ ಪ್ರಕ್ರಿಯಾ ಸಂಹಿತೆಯಂತೆ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಬೇಕಾಗುತ್ತದೆ. ತಮ್ಮ ಸಿದ್ಧ ಅವಲೋಕನೆಗಾಗಿ ಕರ್ನಾಟಕ ಪ್ರಾಣಿ ಬಲಿ ನಿಷೇಧ ಕಾಯ್ದೆ-1959 ರ ಉದ್ಧೃತ ಭಾಗಗಳನ್ನು ಈ ಕೆಳಗೆ ನಮೂದಿಸಿದೆ:-

"ಕರ್ನಾಟಕ ಸರ್ಕಾರ"

ಕಾನೂನು ಇಲಾಖೆ

ಕರ್ನಾಟಕ ಅಧಿನಿಯಮ 1960 ರ 3.

(ಕರ್ನಾಟಕ ರಾಜ್ಯ ಪತ್ರದಲ್ಲಿ 1960 ರ ಫೆಬ್ರವರಿ ನಾಲ್ಕನೇ ದಿನದಂದು ಮೊದಲು ಪ್ರಕಟಿತವಾಗಿದೆ)

---

ಕರ್ನಾಟಕ ಪ್ರಾಣಿಬಲಿಗಳ ಪ್ರತಿಬಂಧಕ ಅಧಿನಿಯಮ, 1959

(1960 ರ ಜನವರಿ ಇಪ್ಪತ್ತೇಳನೆಯ ದಿನದಂದು ರಾಷ್ಟ್ರಪತಿಯ ಅನುಮತಿಯನ್ನು ಪಡೆದಿದೆ).

ಕರ್ನಾಟಕ ರಾಜ್ಯದ ಹಿಂದೂ ದೇವಾಲಯಗಳಲ್ಲಿ ಅಥವಾ ಇವುಗಳ ಆವರಣಗಳೊಳಗೆ ಪ್ರಾಣಿಬಲಿಗಳನ್ನು ಪ್ರತಿಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಹತ್ತನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು, ಎಂದರೆ:-

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ: (1) ಈ ಅಧಿನಿಯಮವನ್ನು ಕರ್ನಾಟಕ ಪ್ರಾಣಿಬಲಿಗಳ ಪ್ರತಿಬಂಧಕ ಅಧಿನಿಯಮ, 1959 ಎಂದು ಕರೆಯತಕ್ಕದ್ದು.
2. ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.
3. ಇದು ತತ್‌ಕ್ಷಣವೇ ಜಾರಿಗೆ ಬರತಕ್ಕದ್ದು.

೨. <u>ಪರಿಭಾಷೆಗಳು:</u> ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಆವಶ್ಯಕವಿರದಿದ್ದರೆ,

(ಕ) ''ಪ್ರಾಣಿ'' ಎಂಬುದು ಪಕ್ಷಿಗಳನ್ನು ಒಳಗೊಳ್ಳುತ್ತದೆ.

(ಖ) ದೇವಾಲಯಕ್ಕೆ ಸಂಬಂಧಿಸಿ ;ಆವರಣಗಳು ಎಂಬುದು ದೇವಾಲಯದ ಸಮೀಪದಲ್ಲಿರುವ ದೇವಾಲಯಕ್ಕೆ ಸೇರಿರುವ ಅಥವಾ ಸೇರದಿರುವ, ಒಳಗೆ ಅಥವಾ ಹೊರಗೆ ನಡೆಸಲಾಗುವ ಪೂಜೆಗೆ ಸಂಬಂಧಿಸಿದ ಉದ್ದೇಶಗಳಿಗಾಗಿ ಸಾಮಾನ್ಯವಾಗಿ ಉಪಯೋಗಿಸಲಾಗುವ ಮತ್ತು ವಿಶೇಷವಾಗಿ, ದೇವಾಲಯದ ಮಂಟಪಗಳ ಪ್ರಾಕಾರಗಳ, ಹಿಂದಿನ ಅಂಗಣಗಳ ಮತ್ತು ಮುಂದಿನ ಅಂಗಣಗಳ, ಭಾಗಗಳನ್ನು ಯಾವುದೇ ಹೆಸರಿನಿಂದ ಕರೆಯಲಿ ಎಲ್ಲ ಭೂಮಿಗಳನ್ನು ಮತ್ತು ಕಟ್ಟಡಗಳನ್ನು ಮತ್ತು ತೆರೆದ ಸಾಮಾನ್ಯವಾಗಿ ನಿಂತಿರುವ ಭಾಗವನ್ನೂ ಸಹ ಒಳಗೊಳ್ಳುತ್ತದೆ.

(ಗ) ''ಬಲಿ'' ಎಂದರೆ, ಯಾವುದೇ ದೇವತೆಯನ್ನು ಒಲಿಸಿಕೊಳ್ಳುವ ಉದ್ದೇಶಕ್ಕಾಗಿ ಅಥವಾ ಆಶಯದಿಂದ ಯಾವುದೇ ಪ್ರಾಣಿಯನ್ನು ಕೊಲ್ಲುವುದು ಅಥವಾ ಅಂಗವಿಕಲಗೊಳಿಸುವುದು;

(ಘ) ''ದೇವಾಲಯ'' ಎಂದರೆ ಸಾರ್ವಜನಿಕ ಧಾರ್ಮಿಕ ಪೂಜಾ ಸ್ಥಳವಾಗಿ ಉಪಯೋಗಿಸಲಾಗುತ್ತಿರುವ ಮತ್ತು ಹಿಂದೂ ಸಮುದಾಯಕ್ಕೆ, ಅಥವಾ ಅದರ ಯಾವುದೇ ಪಂಗಡಕ್ಕೆ ಅಥವಾ ಅದರ ಪ್ರಯೋಜನಕ್ಕಾಗಿ ಸಮರ್ಪಿತವಾಗಿರುವ ಅಥವಾ ಹಿಂದೂ ಸಮುದಾಯವು ಅಥವಾ ಅದರ ಯಾವುದೇ ಪಂಗಡವು ಸಾರ್ವಜನಿಕ ಧಾರ್ಮಿಕ ಪೂಜಾ ಸ್ಥಳವಾಗಿ ಹಕ್ಕಿನಿಂದ ಉಪಯೋಗಿಸಲಾಗುತ್ತಿರುವ, ಯಾವುದೇ ಹೆಸರಿನಿಂದ ಕರೆಯಲಾಗುವ ಸ್ಥಳ, ಮತ್ತು ಇದು ಅಂಥ ಸ್ಥಳಕ್ಕೆ ಹೊಂದಿಕೊಂಡಿರುವ ಉಪ ಪೂಜಾ ಗುಡಿಗಳನ್ನು ಹಾಗೂ ಮಂಟಪಗಳನ್ನು ಒಳಗೊಳ್ಳುತ್ತದೆ.

೩. <u>ದೇವಾಲಯದಲ್ಲಿ ಅಥವಾ ಅದರ ಆವರಣಗಳಲ್ಲಿ ಬಲಿಯನ್ನು ಪ್ರತಿಬಂಧಿಸಲಾಗಿದೆ:</u>

ಯಾವುದೇ ದೇವಾಲಯದಲ್ಲಿ ಅಥವಾ ಅದರ ಆವರಣಗಳೊಳಗೆ ಅಥವಾ ದೇವತೆಯನ್ನು ತೇರಿನಲ್ಲಿ ಅಥವಾ ಬೇರೆ ರೀತಿಯ ಮೆರವಣಿಗೆಯಲ್ಲಿ ಒಯ್ಯುತ್ತಿರುವಾಗ, ಅಂಥ ತೇರಿನ ಅಥವಾ ಅಂಥ ದೇವತೆ ಸಮೀಪದಲ್ಲಿ ಯಾವುದೇ ಪ್ರಾಣಿಯನ್ನು ಯಾವನೇ ವ್ಯಕ್ತಿಯು ಬಲಿ ಕೊಡತಕ್ಕದ್ದಲ್ಲ.

೪. <u>ಬಲಿ ಕೊಡುವಲ್ಲಿ ಪೌರೋಹಿತ್ಯ ಮೊದಲಾದುದನ್ನು ಪ್ರತಿಬಂಧಿಸಲಾಗಿದೆ:</u>

ಯಾವನೇ ವ್ಯಕ್ತಿಯು ದೇವಾಲಯದಲ್ಲಿ ಅಥವಾ ಅದರ ಆವರಣಗಳಲ್ಲಿ ಅಥವಾ, ತೇರಿನ ಅಥವಾ ದೇವತೆಯ ಸಮೀಪದಲ್ಲಿ ಯಾವುದೇ ಬಲಿಯನ್ನು ಕೊಡುವಲ್ಲಿ —

(ಕ) ಪೌರೋಹಿತ್ಯ ವಹಿಸತಕ್ಕದ್ದಲ್ಲ ಅಥವಾ ಪೌರೋಹಿತ್ಯವನ್ನು ಮಾಡಲು ಮುಂದೆ ಬರತಕ್ಕದ್ದಲ್ಲ, ಅಥವಾ

(ಖ) ನಡೆಸತಕ್ಕದ್ದಲ್ಲ ಅಥವಾ ನಡೆಸಲು ಮುಂದೆ ಬರತಕ್ಕದ್ದಲ್ಲ; ಅಥವಾ

(ಗ) ಸೇವೆ ಸಲ್ಲಿಸತಕ್ಕದ್ದಲ್ಲ, ಸಂದಾಗತಕ್ಕದ್ದಲ್ಲ ಅಥವಾ ಭಾಗ ವಹಿಸತಕ್ಕದ್ದಲ್ಲ ಅಥವಾ ಸೇವೆ ಸಲ್ಲಿಸಲು, ಸಂಭಾಗಲು, ಅಥವಾ ಭಾಗವಹಿಸಲು ಮುಂದೆ ಬರತಕ್ಕದ್ದಲ್ಲ.

5. ದೇವಾಲಯಂಗಳನ್ನು ಅಥವಾ ಆವರಣಗಳನ್ನು ಬಲಿಗಾಗಿ ಉಪಯೋಗಿಸಲು ಅವಕಾಶ ಕೊಡತಕ್ಕದ್ದಲ್ಲ: ಯಾವನೇ ವ್ಯಕ್ತಿಯು

(ಕ) ಯಾವುದೇ ದೇವಾಲಯದೊಳಗೆ ಅಥವಾ ಆವರಣದೊಳಗೆ ಇರುವ, ಮತ್ತು

(ಖ) ತನ್ನ ಸ್ವಾಮ್ಯದಲ್ಲಿ ಅಥವಾ ತನ್ನ ನಿಯಂತ್ರಣದಲ್ಲಿ ಇರುವ, ಯಾವುದೇ ಸ್ಥಳದಲ್ಲಿ, ಬಲಿಯನ್ನು ಕೊಡಲು ತಿಳಿದೂ ತಿಳಿದೂ ಅವಕಾಶವನ್ನು ಕೊಡತಕ್ಕದ್ದಲ್ಲ.

6. ದಂಡಗಳು: (1) 3ನೇ ಪ್ರಕರಣ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಆರು ತಿಂಗಳವರೆಗೆ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) 4ನೇ ಪ್ರಕರಣ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಐದುನೂರು ರೂಪಾಯಿಗಳವರೆಗಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

ಪರಂತು, ಅಪರಾಧಿಯು ದೇವಾಲಯದ ಅಧಿಕಾರಿ, ನೌಕರ, ಪ್ರಾಧಿಕಾರ, ನ್ಯಾಸಧಾರಿ ಅಥವಾ ಪೂಜಾರಿ ಇದ್ದರೆ, ಅಥವಾ ಪದಾಧಿಕಾರಿಯಾಗಿದ್ದು ದೇವಾಲಯದಲ್ಲಿ ಯಾವುದೇ ಸೇವೆಯನ್ನು ಸಲ್ಲಿಸುವುದಕ್ಕಾಗಿ ಉಪಲಬ್ಧಗಳನ್ನು ಅಥವಾ ಪರಿಲಬ್ಧಗಳನ್ನು ಸ್ವೀಕರಿಸುತ್ತಿದ್ದರೆ, ಅವನು ಆರು ತಿಂಗಳವರೆಗಿನ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) 5ನೇ ಪ್ರಕರಣ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಮೂರು ತಿಂಗಳವರೆಗಿನ ಅವಧಿಯ ಕಾರಾವಾಸದಿಂದ, ಅಥವಾ ಮೂರು ನೂರು ರೂಪಾಯಿಗಳವರೆಗಿನ ಜುಲ್ಮಾನೆಯಿಂದ, ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

ವಿವರಣೆ: 3ನೇ ಪ್ರಕರಣವನ್ನು, 4ನೇ ಪ್ರಕರಣವನ್ನು ಅಥವಾ 5ನೇ ಪ್ರಕರಣವನ್ನು ಉಲ್ಲಂಘಿಸಲು ಪ್ರಯತ್ನಿಸುವ ಅಥವಾ ಉಲ್ಲಂಘನೆಗೆ ದುಷ್ಪ್ರೇರಿಸುವ ಅಥವಾ ದುಷ್ಪ್ರೇರಿಸಲು ಪ್ರಯತ್ನಿಸುವ ಯಾವನೇ ವ್ಯಕ್ತಿಯು, ಆ ಪ್ರಕರಣವನ್ನು ಉಲ್ಲಂಘಿಸಿದ್ದಾನೆಂದು ಭಾವಿಸತಕ್ಕದ್ದು.

7. ವಾರಂಟಿಲ್ಲದ ದಸ್ತಗಿರಿ ಮಾಡುವ ಬಗ್ಗೆ ಸಾಮಾನ್ಯಾಧಿಕಾರ:

ಸಬ್ ಇನ್ಸ್‌ಪೆಕ್ಟರನ ದರ್ಜೆಗೆ ಕಡಿಮೆಯಿಲ್ಲದ ಯಾವನೇ ಪೊಲೀಸ್ ಅಧಿಕಾರಿಯು ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯನ್ನು ವಾರಂಟಿಲ್ಲದೆ ದಸ್ತಗಿರಿ ಮಾಡಬಹುದು.

8. ನಿಯಮ ರಚನಾಧಿಕಾರ: (i) ಈ ಅಧಿನಿಯಮದ ಉಪಬಂಧಗಳನ್ನು ಸಾಮಾನ್ಯವಾಗಿ ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ, ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, ರಾಜ್ಯ ಸರ್ಕಾರವು ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ರಚಿತವಾದ ನಿಯಮಗಳನ್ನು, ಆ ನಿಯಮಗಳನ್ನು ರಚಿಸಿದ ಅನಂತರ ಎಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಇರಿಸತಕ್ಕದ್ದು, ಮತ್ತು ಸದರಿ ಅವಧಿಯು ಮುಕ್ತಾಯವಾಗುವ ಮುಂಚೆ ಎರಡು ಸದನಗಳ ಪೈಕಿ ಯಾವುದೇ ಸದನವು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಿದರೆ ಅಥವಾ ನಿಯಮವು ಪರಿಣಾಮಕಾರಿಯಾಗತಕ್ಕದ್ದಲ್ಲವೆಂದು ನಿರ್ಣಯಿಸಿದರೆ ಮತ್ತು ಆ ಮಾರ್ಪಾಟುಗಳನ್ನು ಮತ್ತು ನಿರ್ಣಯಗಳನ್ನು ಇನ್ನೊಂದು ಸದನವು ಒಪ್ಪಿದರೆ, ತದನಂತರ ಸಂದರ್ಭಾನುಸಾರ, ಆ ನಿಯಮಗಳು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ.

9. ನಿರಸನ — ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿರುವ ಮೈಸೂರು ಪ್ರಾಣಿ ಬಲಿಗಳ ಪ್ರತಿಬಂಧಕ ಅಧಿನಿಯಮ, 1948 (ಮೈಸೂರು ಅಧಿನಿಯಮ 1948ರ LI) ಮತ್ತು ಮದ್ರಾಸು ಪ್ರದೇಶದಲ್ಲಿ ಜಾರಿಯಲ್ಲಿರುವ, ಮದ್ರಾಸ್ ಪ್ರಾಣಿಗಳ ಮತ್ತು ಪಕ್ಷಿಬಲಿಗಳ ಪ್ರತಿಬಂಧಕ ಅಧಿನಿಯಮ, 1950 (ಮದ್ರಾಸ್ ಅಧಿನಿಯಮ, 1950ರ XXII ) ಇವು ಈ ಮೂಲಕ ನಿರಸಿತವಾಗಿದೆ.

ಪರಂತು, ಮೈಸೂರು ಸಾಮಾನ್ಯ ಖಂಡಗಳ ಅಧಿನಿಯಮ 1899 ರ (ಮೈಸೂರು ಅಧಿನಿಯಮ, 1899ರ III) 6ನೇ ಪ್ರಕರಣವು, ಸದರಿ ನಿರಸನಕ್ಕೆ ಸಂಬಂಧಿಸಿ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮದ 8ನೇ ಪ್ರಕರಣ ಮತ್ತು 24ನೇ ಪ್ರಕರಣಗಳು ಮೈಸೂರು ಅಧಿನಿಯಮದಿಂದ ನಿರಸಿತವಾಗಿದ್ದರೆ ಮತ್ತು ಪುನಃ ಅಧಿನಿಯಮಿತವಾಗಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

ಸಹಿ:
( ಎ.ಎನ್. ಬ್ಯಾನರ್ಜಿ )
ಕರ್ನಾಟಕ ರಾಜ್ಯಪಾಲರು.
ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ
ಹೆಸರಿನಲ್ಲಿ

ಸಹಿ:
( ಲಿಂಗಯ್ಯ ),
ಸರ್ಕಾರದ ಅಧೀನ ಕಾರ್ಯದರ್ಶಿ
ಕಾನೂನು ಮತ್ತು ಸಂಸದೀಯ ವ್ಯವಹಾರಗಳ
ಇಲಾಖೆ(ಆಡಳಿತ -- 2)

ಸಂ. ಆರ್‌ಡಿ. 157 ಎಂ.ಎಸ್.ಟಿ.60, ದಿನಾಂಕ: 1ನೇ ಡಿಸೆಂಬರ್, 1965
ಅಧಿಸೂಚನೆ

ಕರ್ನಾಟಕ ಪ್ರಾಣಿಬಲಿಗಳ ಪ್ರತಿಬಂಧಕ (ಕರ್ನಾಟಕ ಅಧಿನಿಯಮ, 1960ರ 3) 6ನೇ ಪ್ರಕರಣದ (1)ನೇ ಉಪಪ್ರಕರಣದಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಕೆಳಕಂಡ ನಿಯಮಗಳನ್ನು ರಚಿಸುತ್ತದೆ. ಅವುಗಳ ಕರಡನ್ನು ಸದರಿ ಪ್ರಕರಣದ ಮೂಲಕ ಅಗತ್ಯಪಡಿಸಿರುವಂತೆ, 1963ರ ಆಗಸ್ಟ್ 12ನೇ ದಿನಾಂಕದ ಕರ್ನಾಟಕ ರಾಜ್ಯ ಪತ್ರದ IV ಭಾಗದ 2ಗ(i)ನೇ ಉಪಭಾಗದಲ್ಲಿ 1963ರ ಆಗಸ್ಟ್ 12ನೇ ದಿನಾಂಕದ ಆರ್‌ಡಿ. 157 ಎಂ.ಎಸ್.ಟಿ.63ನೇ ಸಂಖ್ಯೆಯ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ ಎಂದರೆ.

1. ಹೆಸರು: ಈ ನಿಯಮಗಳನ್ನು ಕರ್ನಾಟಕ ಪ್ರಾಣಿ ಬಲಿಗಳ ಪ್ರತಿಬಂಧಕ ನಿಯಮಗಳು 1963 ಎಂದು ಕರೆಯತಕ್ಕದ್ದು.

2. <u>ಪರಿಭಾಷೆಗಳು:</u> ಈ ನಿಯಮಗಳಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,—

(ಕ) ಅಧಿನಿಯಮ ಎಂದರೆ, ಕರ್ನಾಟಕ ಪ್ರಾಣಿ ಬಲಿಗಳ ಪ್ರತಿಬಂಧಕ ಅಧಿನಿಯಮ, 1959;

(ಖ) ಸಂಹಿತೆ ಎಂದರೆ, ದಂಡ ಪ್ರಕ್ರಿಯಾ ಸಂಹಿತೆ, 1898

3. <u>ದೇವಾಲಯಗಳಲ್ಲಿ ನಡೆಯುವ ಪ್ರಾಣಿ ಬಲಿಗಳ ಬಗೆಗಿನ ಮಾಹಿತಿಯನ್ನು ಹತ್ತಿರ ಸಮೀಪದ ಪೊಲೀಸು ಠಾಣೆಗೆ ತಿಳಿಸತಕ್ಕದ್ದು:</u>

ದೇವಾಲಯದಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿಯು ಅಥವಾ ಇತರೆ ಯಾವನೇ ವ್ಯಕ್ತಿಯು, ಆ ದೇವಾಲಯಕ್ಕೆ ಹತ್ತಿರ ಸಮೀಪದಲ್ಲಿರುವ ಪೊಲೀಸ್ ಠಾಣೆಯ ಆಡಳಿತವನ್ನು ಹೊಂದಿರುವ ಅಧಿಕಾರಿಗೆ, ಯಾವುದೇ ದೇವಾಲಯದಲ್ಲಿ ಅಥವಾ ಅದರ ಆವರಣದೊಳಗೆ ನಡೆಯುವ ಪ್ರಾಣಿ ಬಲಿಗಳ ಬಗ್ಗೆ ಮೌಖಿಕವಾಗಿ ಅಥವಾ ಲಿಖಿತವಾಗಿ ದೂರು ಕೊಡತಕ್ಕದ್ದು ಮತ್ತು ಹಾಗೆ ದೂರು ಬಂದ ವೇಳೆ ಅಥವಾ ತಾನಾಗಿಯೇ ಪೊಲೀಸು ಅಧಿಕಾರಿಯು ಈ ಅಧಿನಿಯಮದ ಮತ್ತು ಸಂಹಿತೆಯ ಉಪಬಂಧಗಳಿಗನುಸಾರವಾಗಿ ಅವಶ್ಯಕವಾದ ಕ್ರಮವನ್ನು ಕೈಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಹೆಸರಿನಲ್ಲಿ,
ಸಹಿ:
(ಪಿ.ವಿ.ರಾಮಕೃಷ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ),
ರೆವಿನ್ಯೂ ಇಲಾಖೆ.

ಮೇಲ್ಕಂಡ ಕಲಂಗಳಲ್ಲಿ ತಿಳಿಸಿರುವಂತೆ ಪೂಜಾ ಸ್ಥಾನಗಳಲ್ಲಿ ಪ್ರಾಣಿ ಬಲಿಗೆ ಯಾವುದೇ ರೀತಿಯಲ್ಲಿ ಆಸ್ಪದ ನೀಡತಕ್ಕದ್ದಲ್ಲ. ಪೂಜಾ ಸ್ಥಾನದಲ್ಲಿ ಪ್ರಾಣಿ ಬಲಿಯು ಜರುಗುವ ಸುಳಿವು ಸಿಕ್ಕಿದೊಡನೆ, ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡತಕ್ಕದ್ದು, ಮತ್ತು ಸದರಿ ಕಾಯ್ದೆಯ ಕಲಂ 6 ಮತ್ತು 7 ರಲ್ಲಿರುವಂತೆ ಕಲಂ 3, 4 ಮತ್ತು 5 ಗಳನ್ನು ಉಲ್ಲಂಘಿಸಿದವರ ವಿರುದ್ಧ ಕ್ರಮ ಜರುಗಿಸಿ ದಂಡಿಸುವ ತೀವ್ರ ಪ್ರಕ್ರಿಯೆಯನ್ನು ಮಾಡತಕ್ಕದ್ದು.

ಈ ಕಾನೂನನ್ನು ಕ್ರಮಬದ್ಧವಾಗಿ ಬಳಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಿ, ಪ್ರಾಣಿ ಬಲಿಯನ್ನು ಸಂಪೂರ್ಣವಾಗಿ ನಿಲ್ಲಿಸುವುದಕ್ಕಾಗಿ ಮತ್ತೊಮ್ಮೆ ಈ ಮೂಲಕ ಆಗ್ರಹಿಸಲಾಗಿದೆ. ಪೂಜಾ ಸ್ಥಾನಗಳಲ್ಲಿ ಮೇಲೆ ತಿಳಿಸಿದಂತೆ ಪ್ರಾಣಿ ಬಲಿ ನಿಷೇಧಕ್ಕೆ ಎಲ್ಲಾ ನಿವಾರಣ ಕ್ರಮಗಳನ್ನು ಕೈಗೊಂಡ ನಂತರವೂ ಇಂತಹ ಅಮಾನುಷ, ಕಾನೂನು ಬಾಹಿರ ಕೃತ್ಯಗಳು ಜರುಗಿದರೆ, ಇದಕ್ಕೆ ಹೊಣೆಯಾದವರನ್ನು ಕಾನೂನಿನಡಿಯಲ್ಲಿ ದಂಡಿಸಲು ಕ್ರಮ ಕೈಗೊಂಡು ಈ ಕಛೇರಿಗೆ ವರದಿ ಸಲ್ಲಿಸುವುದು.

ಈ ವಿಷಯದಲ್ಲಿ ಯಾವುದೇ ನಿರ್ಲಕ್ಷತೆ ತೋರಿಸಿದ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಅರ್ಚಕರ ಅಥವಾ ಯಾವುದೇ ಮುಜರಾಯಿ ಧಾರ್ಮಿಕ ದತ್ತಿ ಅಧಿಕಾರಿಯ ವಿರುದ್ಧ ಸದರಿ ಕಾಯಿದೆಯ ಕಲಂ 3, 4 ಮತ್ತು 5 ರಂತೆ ದುಷ್ಪ್ರೇರಣೆ ಉಲ್ಲಂಘನೆ ಮಾಡಿರುವುದಾಗಿ ಆಪಾದಿಸಿ ಉಗ್ರ ಕ್ರಮ ಕೈಗೊಳ್ಳಲಾಗುವುದು.

ಈ ವಿಷಯಗಳನ್ನು ಎಲ್ಲಾ ಸಹ ವಿಭಾಗಾಧಿಕಾರಿಗಳ ಮತ್ತು ತಹಶೀಲ್ದಾರರ ಗಮನಕ್ಕೂ ತಂದು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳೂ ಈ ಬಗ್ಗೆ ಜಾಗ್ರತರಾಗಿ ಇಂತಹ ಪ್ರಾಣಿ ಬಲಿಗಳು ಜರುಗದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವಂತೆ ಆಗ್ರಹಿಸಲಾಗಿದೆ.

( ಕೆ. [illegible] )
ಧಾರ್ಮಿಕ ದತ್ತಿ ಆಯುಕ್ತರು.

1) ಎಲ್ಲಾ ಜಿಲ್ಲಾಧಿಕಾರಿಗಳಿಗೆ,

2) ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

3) ಸಹಾಯಕ ಆಯುಕ್ತರು, ಹೆಚ್.ಆರ್. ಮತ್ತು ಸಿ.ಇ., ಮಂಗಳೂರು, ಉಡುಪಿ, ಚಾಮರಾಜನಗರ, ಬಳ್ಳಾರಿ.

ಶಾ.